ಉತ್ತರ ತಪ್ಪು ಎಂದಾದರೂ ಹೇಳಬೇಕು, ಇಲ್ಲದಿದ್ದರೆ ಮುಖ್ಯಮಂತ್ರಿಗಳೇನು ಹೇಳಿದ್ದಾರೆ ಆ ವಿಷಯವನ್ನು ಕ್ಯಾಬಿನೇಟ್ಗೆ ತೆಗೆದುಕೊಂಡು ಹೋಗಿ ಅದರಂತೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಬೇಕು. ಅವೆರಡರಲ್ಲಿ ಒಂದು ಆಗಬೇಕು. ಅವರ ಉತ್ತರವನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. ಅವರು ಆ ರೀತಿ ಹೇಳಲಿಲ್ಲವೆಂಬುದನ್ನು ಹೇಳಿದರು. ತಾವು ದಾಖಲೆಯನ್ನು ತರಿಸಿ ನೋಡಿ. ಬೇಕಾದರೆ ಸ್ವಲ್ಪ ಸಮಯ ತೆಗೆದುಕೊಂಡು ದಾಖಲೆ ತರಿಸಿ ನೋಡಿ. ಅವರು ಆ ರೀತಿ ಹೇಳಲಿಲ್ಲವೆನ್ನತಕ್ಕ ಮಾತನ್ನು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳಲಾಗುವುದಿಲ್ಲ. We cannot evade the responsibilities casted on all of us.

ರಾಜ್ಯ ಸರ್ಕಾರದಿಂದ ಗೊಬ್ಬರಕ್ಕೆ ಸಹಾಯಧನ

45 -ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವರ್ಷವೂ ರಾಜ್ಯ ಸರ್ಕಾರ ರೈತರು ಕೊಳ್ಳುವ ಗೊಬ್ಬರಕ್ಕೆ ಸಬ್ಸಿಡಿ ನೀಡುತ್ತಿದ್ದುದು ನಿಜವೇ, ಹಾಗಿದ್ದಲ್ಲಿ ಈ ವರ್ಷವೂ ಸದರಿ ರಿಯಾಯಿತಿಯು ಜಾರಿಯಲ್ಲಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಆ) ಹಾಗಿದ್ದಲ್ಲಿ ಯಾವ ತಿಂಗಳಿಂದ ರೈತರಿಗೆ ಗೊಬ್ಬರ ಸಬ್ಸಿಡಿ ನೀಡಲಾಗುತ್ತಿದೆ.

ಇ) 1993-94ನೇ ಸಾಲಿನಲ್ಲಿ ಜಿಲ್ಲಾವಾರು ನೀಡಿದ ಸಬ್ಸಿಡಿ ಹಣ ಎಷ್ಟು? 1994-95ನೇ ಸಾಲಿಗೆ ನೀಡುವ ಹಣ ಎಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) 1992-93ನೇ ಸಾಲಿನ ಹಿಂಗಾರು ಬೇಸಿಗೆ ಹಂಗಾಮಿನಿಂದ ರೈತರು ಕೊಳ್ಳುವ ಅನಿಯಂತ್ರಣದಲ್ಲಿರುವ ರಸಗೊಬ್ಬರಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ. ಈ ವರ್ಷವೂ ಸಹ ಈ ರಿಯಾಯಿತಿ ಯೋಜನೆಯು ಜಾರಿಯಲ್ಲಿದೆ.

ಆ) ರಾಜ್ಯದಲ್ಲಿ ಈ ವರ್ಷ ದಿನಾಂಕ : 16-6-1994 ರಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ರೈತರಿಗೆ ಸಬ್ಸಿಡಿ ದರದಲ್ಲಿ ರಸಗೊಬ್ಬರಗಳನ್ನು ಪೂರೈಸಲಾಗುತ್ತಿದೆ.

1993-94ನೇ ಸಾಲಿನಲ್ಲಿ ನೀಡಿದ ಜಿಲ್ಲಾವಾರು ಸಬ್ಸಿಡಿ ಹಣದ ವಿವರವನ್ನು ಲಗತ್ತಿಸಲಾಗಿದೆ.

1994-95ನೇ ಸಾಲಿನಲ್ಲಿ ನೀಡುವ ಹಣವನ್ನು ನಿಗದಿಪಡಿಸಿಲ್ಲ, ಇದು ವಿತರಣೆಯಾಗುವ ರಸಗೊಬ್ಬರದ ಪ್ರಮಾಣವನ್ನು ಅವಲಂಬಿಸಿದ್ದು, ಪ್ರಮಾಣವನ್ನು ಮಿತಿಗೊಳಿಸಿಲ್ಲ.

ವಿತರಣೆಯಾಗುವ ಪೂರ್ತ ಪ್ರಮಾಣಕ್ಕೆ ಸಬ್ಸಿಡಿಯನ್ನು ಸಂಬಂಧಪಟ್ಟ ತಯಾರಕರಿಗೆ ಕೇಂದ್ರ ಸರ್ಕಾರವೇ ನೇರವಾಗಿ ನೀಡುವುದು.

1993-94ನೇ ಸಾಲಿನಲ್ಲಿ ಜಿಲ್ಲಾವಾರು ನೀಡಿರುವ ಸಹಾಯಧನ ಮತ್ತು ಅದರ ಬಳಕೆಯ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಗಳು	ಸಬ್ಸಿಡಿ ಹಣ (ಲಕ್ಷರೂ.ಗಳಲ್ಲಿ)
1.	ಬೆಂಗಳೂರು ನಗರ	143.53
2.	ಬೆಂಗಳೂರು ಗ್ರಾಮಾಂತರ	125.14
3.	ಕೋಲಾರ	203.91

4.	ತುಮಕೂರು	186.65
5.	ಶಿವಮೊಗ್ಗ	381.96
6.	ಚಿತ್ರದುರ್ಗ	450.45
7.	ಮೈಸೂರು	302.65
8.	ಮಂಡ್ಯ	295.73
9.	ಕೊಡಗು	166.45
10.	ಹಾಸನ	177.83
11.	ಚಿಕ್ಕಮಗಳೂರು	257.13
12.	ದಕ್ಷಿಣ ಕನ್ನಡ	136.78
13.	ಧಾರವಾಡ	353.98
14.	ಉತ್ತರಕನ್ನಡ	47.66
15.	ಬೆಳಗಾಂ	302.40
16.	ಬಿಜಾಪುರ	231.39
17.	ರಾಯಚೂರು	685.94
18.	ಬಳ್ಳಾರಿ	454.83
19.	ಗುಲ್ಬರ್ಗಾ	151.47
20.	ಬೀದರ್	69.91
	ಒಟ್ಟು	5125.79

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ. ರಾಜ್ಯದ ರೈತರಿಗೆ ಸಬ್ಸಿಡಿ ರೂಪದಲ್ಲಿ ಗೊಬ್ಬರವನ್ನು ವಿತರಣೆ ಮಾಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಉತ್ತರದಲ್ಲಿ 16-16-94ರಿಂದ ಈ ಯೋಜನೆ ರಾಜ್ಯದಲ್ಲಿ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ನಾನು ತಮ್ಮಲ್ಲಿ ನೇರವಾಗಿ ಕೇಳಬಯಸುವುದೇನೆಂದರೆ, ಈಗ ರಸಗೊಬ್ಬರವನ್ನು ಉಪಯೋಗಿಸತಕ್ಕ ಕಾಲ ಮೀರುತ್ತಿದೆ. ರಸ ಗೊಬ್ಬರವು ಸಿಗದೆ ರೈತರು ಹಾಹಾಕಾರಪಡುತ್ತಿದ್ದಾರೆ. ರಸಗೊಬ್ಬರವನ್ನು ಸಬ್ಸಿಡಿಯಲ್ಲಿ ಕೊಡುವ ಪದ್ಧತಿ 16.6.94ರಿಂದ ಜಾರಿಗೆ ಬಂದಮೇಲೆ ಇವತ್ತಿನವರೆಗೆ ಎಷ್ಟು ಗೊಬ್ಬರವನ್ನು ಆ ರೀತಿ ವಿತರಣೆ ಮಾಡಿದ್ದೀರಿ? ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಮತ್ತು ಅದಕ್ಕಾಗಿ ಎಷ್ಟು ಹಣವನ್ನು ನಿಗದಿ ಮಾಡಿದ್ದೀರೆಂದು ಪ್ರಶ್ನೆಯನ್ನು ಕೇಳಿದ್ದರೆ, ಆ ರೀತಿ ನಿಗದಿ ಮಾಡುವುದಿಲ್ಲ, ಗೊಬ್ಬರವನ್ನು ಉಪಯೋಗ ಮಾಡುವ ಆಧಾರದ ಮೇಲೆ ಅದನ್ನು ನಿರ್ಣಯ ಮಾಡಲಾಗುತ್ತದೆಂದು ಹೇಳಿದ್ದಾರೆ. ಇದುವರೆಗೆ ಎಷ್ಟು ಗೊಬ್ಬರವನ್ನು ಸಬ್ಸಿಡಿಯ ಮೂಲಕ ಕೊಟ್ಟಿದ್ದೀರಿ? ಮುಂದೆ ಎಷ್ಟು ಮೊತ್ತವನ್ನು ಅದಕ್ಕಾಗಿ ತೆಗೆದು ಇಟ್ಟಿದ್ದೀರಿ? ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಎರಡನೆಯದಾಗಿ, ಇವತ್ತು ಯೂರಿಯಾ ಗೊಬ್ಬರಕ್ಕೆ ಇಡೀ ರಾಜ್ಯದಲ್ಲಿ ಹಾಹಾಕಾರವಿದೆ, ಅದು ಸಿಗುತ್ತಿಲ್ಲ ಕೆಲವು ಜಿಲ್ಲೆಗಳಲ್ಲಿ ಇವತ್ತು ಮಾರ್ಕೆಟಿಂಗ್ ಫೆಡ್ರೇಷನ್ನಿಂದ ಸೊಸೈಟಿಗಳಿಗೆ ಗೊಬ್ಬರವನ್ನು ಕೊಡುವುದಕ್ಕೆ ಬಿಲ್ ಹಾಕಿಸಿದ್ದಾರೆ. ಆದರೆ ಇದುವರೆಗೆ ಒಂದು ಚೀಲ ಗೊಬ್ಬರವನ್ನು ತೆಗೆದುಕೊಳ್ಳದೆ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವ ಬಗ್ಗೆ ನನ್ನ ಹತ್ತಿರ ದಾಖಲೆಗಳಿದೆ. ಈ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಸಬ್ಸಿಡಿಯ ಬಗ್ಗೆ ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಹೇಳುವುದಾದರೆ, ಕಳೆದ 92Ë93ರಲ್ಲಿ ಗೊಬ್ಬರದ ಬೆಲೆ ಜಾಸ್ತಿ ಆದಾಗ ಕೇಂದ್ರ ಸರ್ಕಾರ ಸಬ್ಸಿಡಿಯನ್ನು ಘೋಷಣೆ ಮಾಡಿದಮೇಲೆ ನಮ್ಮ ಸರ್ಕಾರದ ವತಿಯಿಂದ ಜಿಲ್ಲಾವಾರು ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಈಸಾರಿಯ ತೀರ್ಮಾನ ಕೇಂದ್ರ ಸರ್ಕಾರದ ವತಿಯಿಂದ ಆಗತಕ್ಕದ್ದು. 10ನೇ ತಾರೀಖು ನಮಗೆ ಕಮ್ಯುನಿಕೇಷನ್ ಬಂತು. 16ನೇ ತಾರೀಖು ಇಡೀ ದೇಶದಲ್ಲೇ ಪ್ರಪ್ರಥಮವಾಗಿ ನಾವೇ ಇದನ್ನು ಜಾರಿಗೆ ತಂದವರು. 16-6-94ರಿಂದ ಈ ಕಾರ್ಯಕ್ರಮವನ್ನು ನಾವು ಜಾರಿಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಯಾರ್ಯಾರು ಎಷ್ಟೆಷ್ಟು ಗೊಬ್ಬರವನ್ನು ತೆಗೆದುಕೊಳ್ಳುತ್ತಾರೋ ಅಷ್ಟಕ್ಕೂ ನಾವು ಸಬ್ಸಿಡಿಯನ್ನು ಕೊಡುವುದಕ್ಕೆ ತಯಾರಿದ್ದೇವೆ.

ಇನ್ನು ಎರಡನೆಯದಾಗಿ, ಯೂರಿಯಾ ಸಿಕ್ಕುತ್ತಿಲ್ಲವೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಇತ್ತೀಚೆಗೆ ನಾನು ಕೇಂದ್ರ ಸರ್ಕಾರದ ರಸಗೊಬ್ಬರಕ್ಕೆ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿದಮೇಲೆ ನಮಗೆ ಈಗ ಗೊಬ್ಬರ ಬಂದಿದೆ. ಮಾನ್ಯ ಸದಸ್ಯರು ಹೇಳಿದಂತ ಹಿಂದೆ ನಮಗೆ ಗೊಬ್ಬರದ ಕೊರತೆ ಇದ್ದುದು ನಿಜ. ಆದರೆ ಈಗ ಈ ಕೊರತೆ ಇಲ್ಲ. ಬಂದಿರತಕ್ಕ ಗೊಬ್ಬರದಲ್ಲಿ ಹೆಚ್ಚಿನ ಭಾಗವನ್ನು ಉತ್ತರ ಕರ್ನಾಟಕದ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಿಗೆ ನಾವು ಕಳುಹಿಸಿಕೊಟ್ಟಿದ್ದೇವೆ. ನಮಗೆ ಗೊಬ್ಬರವನ್ನು ಸರಬರಾಜು ಮಾಡುತ್ತಿದ್ದ ಮಂಗಳೂರು ಮತ್ತು ಜುವಾರಿಯ ರಸಗೊಬ್ಬರ ಕಾರ್ಖಾನೆಗಳಲ್ಲಿ ಸ್ವಲ್ಪಮಟ್ಟಿನ ತೊಂದರೆ ಉದ್ಭವಿಸಿದ್ದರಿಂದ ನಮ್ಮಲ್ಲಿ ರಸಗೊಬ್ಬರದ ಕೊರತೆಯಾಗುವುದಕ್ಕೆ ಕಾರಣವಾಗಿತ್ತು. ಈಗ ನಾವು ಕ್ರಮ ತೆಗೆದುಕೊಂಡಿದ್ದು ಹೆಚ್ಚಿನ ರಸಗೊಬ್ಬರವನ್ನು ಬೇಡಿಕೆ ಇರುವ ಜಾಗಕ್ಕೆ ಸರಬರಾಜು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನಲ್ಲಿರತಕ್ಕ ಕೆಲವು ದಾಖಲಾತಿಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದು ಬಹಳ ಪ್ರಮುಖವಾದುದು. ಅವರು ಹೇಳಿದ ರೀತಿಯಲ್ಲಿ ಗೊಬ್ಬರ ಸರಬರಾಜು ಆಗಿಲ್ಲ. ಯೂರಿಯಾ ಬಗ್ಗೆ ಹಾಹಾಕಾರ ಇದೆ. ನಿಮ್ಮ ಮಾರ್ಕೆಂಟಿಂಗ್ ಫೆಡರೇಷನ್ನಿಂದ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಡಿ.ಎಸ್.ಎಸ್. ಮತ್ತು ಆರ್.ಎಸ್.ಎಸ್. ಸೊಸೈಟಿಗಳಿಗೆ ಇತ್ತೀಚೆಗೆ 500 ಟನ್ ಗೊಬ್ಬರವನ್ನು ವಿತರಣೆ ಮಾಡಿದ್ದೇವೆಂದು ಸೊಸೈಟಿಯಿಂದ ಬಿಲ್ ಹಾಕಿಸಿದರು. ಸ್ವಾಮಿ, ಆ ಸೊಸೈಟಿಯಲ್ಲಿ ಒಂದು ರೂಪಾಯಿ ಕೂಡ ಹಣ ಇರಲಿಲ್ಲ. ಆದರೆ ಇವರು ಬಿಲ್ ಹಾಕಿದಂತೆ ದಾಖಲೆಯನ್ನು ತೋರಿಸಿದ್ದಾರೆ. ಇವತ್ತು ತಮಗೆ ಹೇಳುವುದಾದರೆ 50 ಕೆ.ಜಿ. ಯೂರಿಯ 133 ರೂಪಾಯಿ 50 ಪೈಸೆಗೆ ಸಿಕ್ಕುತ್ತದೆ. ಮಾರ್ಕೆಟ್ ಬೆಲೆ 169 ರೂಪಾಯಿ ಇದೆ. ಬ್ಲಾಕ್ ಮಾರ್ಕೆಟ್ನಲ್ಲಿ 250 ರೂಪಾಯಿ ಕೊಟ್ಟರೂ ಗೊಬ್ಬರ ಸಿಕ್ಕುತ್ತಿಲ್ಲ. ಇವರು 500ಕ್ವಿಂಟಾಲನ್ನು ಬಳ್ಳಾರಿ ಜಿಲ್ಲೆಯಲ್ಲಿ ಸೊಸೈಟಿಗಳಿಗೆ ಕೊಟ್ಟಿದ್ದೇವೆಂದು ಇವರು ರಸೀತಿಯನ್ನು ಹಾಕಿಸಿ ಅಲ್ಲಿ ಒಂದು ಚೀಲವನ್ನೂ ವಿತರಣೆ ಮಾಡಿಲ್ಲ. ಆ ಸೊಸೈಟಿಯವರಿಗೇ ಗೊತ್ತಿಲ್ಲದ ರೀತಿಯಲ್ಲಿ ಇವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಿಕೊಂಡಿದ್ದಾರೆ. ಇದು ಇಡೀ ರಾಜ್ಯದಲ್ಲೆಲ್ಲಾ ನಡೆದಿದೆ. ಅಲ್ಲಿಯ ಸಂಬಂಧಪಟ್ಟ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ, ಇವರು ಸಿಂದಗೇರಿಎಣ್ಣೆ ಬೆಳೆಗಾರರ ಸಂಘ, ಸಿಂಧಗೇರಿ ಕ್ಯಾದಗಿ ಹಾಳ, ಕಪ್ಪಗಲ್ಲು, ಎಮ್ಮಿಗನೂರು, ಸಿಂಧಗೇರಿ, ಸಿರಿಗೇರಿ, ಹಡಗಲಿ, ಹುರುಳಿಹಾಳು, ಇವರುಗಳಿಗೆ 500 ಟನ್ ಯೂರಿಯಾವನ್ನು ಕೊಟ್ಟಿದ್ದೇವೆಂದು ದಾಖಲೆ ತೋರಿಸಿದ್ದಾರೆ. ಅಲ್ಲಿನ ಸುತ್ತಮುತ್ತಲಿನ ರೈತರು ಈ ಸೊಸೈಟಿಯವರನ್ನು ಫೇರಾವ್ ಮಾಡಿದಾಗ ಆ ಸೊಸೈಟಿಯವರು ಲಿಖಿತ ಮೂಲಕ ಏನು ಬರೆದುಕೊಟ್ಟಿದ್ದಾರೆ ಎಂದರೆ, ನಾವು

ಒಂದೇ ಒಂದು ಕೆ.ಜಿ. ಗೊಬ್ಬರವನ್ನೂ ಕೊಂಡಿಲ್ಲ, ಅವರೇ ದಾಖಲೆ ನಿರ್ಮಾಣ ಮಾಡಿಕೊಂಡು ಅವರೇ ಬ್ಲಾಕ್ಮಾರ್ಕೆಟ್ನಲ್ಲಿ ಮಾರಾಟ ಮಾಡಿಕೊಂಡಿದ್ದಾರೆಂದು ಪೋಲೀಸ್ ಅಧಿಕಾರಿಗಳ ಸಮಕ್ಷಮದಲ್ಲಿ ಒಪ್ಪಿಕೊಂಡಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆ? ಈ ರೀತಿ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿರತಕ್ಕದ್ದಕ್ಕೆ ದಾಖಲೆಗಳು ನನ್ನ ಹತ್ತಿರ ಇದೆ. ಇದರ ಬಗ್ಗೆ ತಾವು ಈ ಸದನದ ಒಂದು ಸಮಿತಿಯನ್ನು ರಚನೆ ಮಾಡಿ ಆಗುತ್ತಿರುವ ಅವ್ಯವಹಾರವನ್ನು ತಡೆದು, ಅಲ್ಲಿಯ ಸಂಬಂಧಪಟ್ಟ ಮಾರ್ಕೆಟಿಂಗ್ ಸೊಸೈಟಿಯ ಪ್ರಮುಖ ವ್ಯಕ್ತಿಗಳು ಈ ಅವ್ಯವಹಾರದಲ್ಲಿ ಇನ್ವಾಲ್ವ್ ಆಗಿದ್ದಾರೆ, ಸೊಸೈಟಿಗಳ ಹೆಸರಿನಲ್ಲಿ ಯಾರು ಕೋಟ್ಯಾಂತರ ರೂಪಾಯಿಗಳ ಹಣವನ್ನು ಲೂಟಿ ಮಾಡುತ್ತಿದ್ದಾರೆ ಅವರ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ತಾನೆ ಈ ವಿಚಾರವನ್ನು ನನ್ನ ಗಮನಕ್ಕೆ ತರುತ್ತಿದ್ದಾರೆ. ನಾನೂ ಕೂಡ ಅಲ್ಲಿ ಪ್ರವಾಸ ಮಾಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರ ಹತ್ತಿರ ಏನೇನು ದಾಖಲಾತಿಗಳಿವೆ ಅವುಗಳನ್ನು ನನಗೆ ಕಳುಹಿಸಿಕೊಡಲಿ, ಇದಕ್ಕೆ ಈ ಸದನದ ಸಮಿತಿಯನ್ನು ರಚನೆ ಮಾಡುವುದು ಏನೂ ಬೇಕಾಗಿಲ್ಲ. ನಿಮಗಿಂತಾ ರೈತರ ಪರವಾಗಿ ಕೆಲಸ ಮಾಡುವುದಕ್ಕೆ ಸಿದ್ಧವಾಗಿದ್ದೇನೆ. ಏನು ತೊಂದರೆಯಾಗಿದೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಯ ಜೊತೆ ಚರ್ಚೆಮಾಡಿ ಪರಿಹಾರ ಮಾಡುತ್ತೇನೆ. ಯಾರೇ ಅಧಿಕಾರಿ ತೊಂದರೆ ಮಾಡಿದ್ದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಾಯಿಂಟ್ ಅದಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಕಳೆದ 15 ದಿನಗಳಿಂದ ಗೊಬ್ಬರ ಸಿಕ್ಕುತ್ತಿಲ್ಲವೆಂದು ಹಾಹಾಕಾರ ಎದ್ದಿದೆ, ಗಲಾಟೆ ಆಗಿದೆ. ಸೊಸೈಟಿಗಳನ್ನು ರೈತರು ಘೇರಾವ್ ಮಾಡಿದ್ದಾರೆ. ನಾವು ಗೊಬ್ಬರವನ್ನು ಪಡೆದಿಲ್ಲ ಎಂದು ಸೊಸೈಟಿಗಳ ಸೆಕ್ರೆಟರಿಗಳು ಲಿಖಿತಮೂಲಕ ಕೊಟ್ಟಿದ್ದಾರೆ. ಪೋಲೀಸರು ಅವರನ್ನು ಹಿಡಿದು ಕ್ರಮ ತೆಗೆದುಕೊಳ್ಳುವ ಕೆಲಸ ಆಗಬೇಕು. ಈ ವಿಚಾರ ಸರ್ಕಾರಕ್ಕೆ ಗೊತ್ತೇ ಇಲ್ಲವೆಂದು ಹೇಳುವುದಾದರೆ, ನಿಮ್ಮ ಸರ್ಕಾರ ರೈತರ ಪಾಲಿಗೆ ಬದುಕಿದೆಯೋ, ಸತ್ತಿದೆಯೋ ಎಂದು ಕೇಳಬೇಕಾಗಿದೆ. ನಾನಾದರೂ ಹೇಳುತ್ತೇನೆ, ಇದರಲ್ಲಿ ದೊಡ್ಡದೊಡ್ಡವರು ಇನ್ವಾಲ್ವ್ ಆಗಿದ್ದೀರಿ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ನನ್ನ ಪ್ರಮುಖ ಆರೋಪ ಇದೆ. ಆದ್ದರಿಂದ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಸತ್ಯಾಂಶ ಏನೆಂದು ಪರಿಶೀಲನೆ ಆಗಬೇಕು, ತಾವು ಸದನದ ಸಮಿತಿಯನ್ನು ರಚಿಸಬೇಕು, ಮತ್ತು ಇದರ ಬಗ್ಗೆ ವಿಶೇಷವಾದ ರೀತಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ನನ್ನಲ್ಲಿರುವ ಎಲ್ಲ ದಾಖಲಾತಿಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು : ಕಳುಹಿಸಿ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ಸೊಸೈಟಿಯವರೂ ಕೂಡ ನಮಗೆ ಗೊಬ್ಬರ ಬಂದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಮಗೆ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಬೇಕು, ಸದನದ ಸಮಿತಿ ಮಾಡಲು ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಹೇಳಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ : ರೈತರ ಹೆಸರಿನಲ್ಲಿ ಬಹಳ ಲೂಟಿಯಾಗಿದೆ. ಇದು ಬಹಳ ಗುರುತರವಾದ ಆಪಾದನೆ.

ಅಧ್ಯಕ್ಷರು : ಅವರಲ್ಲಿ ಏನೇನು ಪೇಪರ್ಸ್ ಇವೆ ಅದನ್ನೆಲ್ಲಾ ಕಳುಹಿಸಿಕೊಡಲಿ ನೋಡೋಣ.

(ಗೊಂದಲ)

ಅಧ್ಯಕ್ಷರು : ಪೇಪರ್ಸ್ ಕಳುಹಿಸಿಕೊಡಿ.

ಶ್ರೀ ಸಿ.ಬೈರೇಗೌಡ : ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಪರಿಶೀಲನೆ ಮಾಡದೆ ನಾನು ಹೇಗೆ ಅವಕಾಶ ಮಾಡಿಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ದೊಡ್ಡ ದೊಡ್ಡವರೆಲ್ಲರೂ ಇನ್ವಾಲ್ವ್? ಆಗಿದ್ದಾರೆ. ಚರ್ಚೆಗೆ ಅವಕಾಶಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು : ಪೇಪರ್ಸ್ಕೊಡಿ. ಪರಿಶೀಲನೆ ಮಾಡಿ ನೋಡುತ್ತೇನೆ. ತಮಗೆ ಅವಕಾಶ ಮಾಡಿಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ರೈತರು ಸತ್ತುಹೋಗುತ್ತಿದ್ದಾರೆ. 7-8 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ.

(ಗೊಂದಲ)

ಶ್ರೀ ಹೆಚ್.ಎಂ.ರೇವಣ್ಣ : ನಿಮ್ಮದು ಕೇವಲ ಹೇಳುವುದೇ ಆಗಿಹೋಯಿತಲ್ಲಾ. ನಿಮ್ಮಲ್ಲಿರುವ ಪೇಪರನ್ನು ಕಳುಹಿಸಿಕೊಡಿ, ನೋಡೋಣ:

(ಗೊಂದಲ)

ಅಧ್ಯಕ್ಷರು : ನೀವು ಪೇಪರನ್ನು ಕಳಿಹಿಸಿಕೊಡಿ. ಹಾಗೇ ನೀವು ಆರ್ಗ್ಯೂ ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಹೆಚ್.ಎಂ. ರೇವಣ್ಣ : ಅವರು ಹೇಳುವುದನ್ನೆಲ್ಲಾ ನಾನು ಒಪ್ಪುವುದಿಲ್ಲ. ನಾವು ಯಾರೂ ಅದರಲ್ಲಿಲ್ಲ. ನೇರವಾಗಿ ಆ ರೀತಿ ಮಾನ್ಯ ಸದಸ್ಯರು ಮಾತನಾಡುವುದು ಸರಿಯಲ್ಲ. ನೀವು ಪೇಪರ್ಸ್ ಕೊಡಿ, ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಚ್.ಎಂ. ರೇವಣ್ಣ : ನಿಮ್ಮ ಹತ್ತಿರ ಇರುವ ಪೇಪರನ್ನು ಕೊಡಿ.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

(ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನವನ್ನು ಬಿಟ್ಟು ಸಭಾಧ್ಯಕ್ಷರ ಪೀಠದ ಹತ್ತಿರ ನಿಂತು ಮಾತನಾಡುತ್ತಿದ್ದರು.)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮಗೆ ದಾಖಲೆಗಳನ್ನು ಕೊಡುತ್ತೇನೆ.

ಅಧ್ಯಕ್ಷರು : ತಾವು ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದೇಶಪಾಂಡೆಯವರೇ, ನಾನು ತಮಗೆ ದಾಖಲೆಗಳನ್ನು ಕೊಡುತ್ತೇನೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ತಮ್ಮನ್ನು ವಿರೋಧಮಾಡಿ ಮಾತನಾಡುತ್ತಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ತಾವು ನಿಂತುಕೊಂಡಾಗ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮಗೆ ಈಗಲೂ ದಾಖಲೆಗಳನ್ನು ಕೊಡುತ್ತೇನೆ.

ಅಧ್ಯಕ್ಷರು : ನಾಗಮಾರಪಲ್ಲಿಯವರೆ, ಇಲ್ಲಿ ನಾನಿದ್ದೇನೆ, ತಾವು ಸದಸ್ಯರಿಗೆ ನೇರವಾಗಿ ಮಾತನಾಡುವುದು ಸರಿಯಲ್ಲ. ಅವರಾಗಲಿ, ತಾವಾಗಲಿ, ಏನಾದರೂ ಹೇಳುವುದಿದ್ದರೆ ನೇರವಾಗಿ ನನಗೆ ಹೇಳಿ. ನಾನು ಅದನ್ನು ಸರಿಪಡಿಸುತ್ತೇನೆ. ಯಡಿಯೂರಪ್ಪನವರೇ, ತಮ್ಮಲ್ಲಿರುವ ದಾಖಲೆಗಳನ್ನು ನನಗೆ ಕಳುಹಿಸಿಕೊಡಿ. ಅದನ್ನು ನಾನು ಪರಿಶೀಲಿಸುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಇದು ಸರಿ ಎನಿಸಿದರೆ ಇದನ್ನು ಅರ್ಧ ಗಂಟೆ ಚರ್ಚೆಗೂ ಅವಕಾಶ ಕೊಡುತ್ತೇನೆ. ಅನಂತರ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನೂ ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬಹಳ ಸ್ಪಷ್ಟವಾಗಿ . ಹೇಳಿದ್ದಾರೆ. ನಾನು ಮಾನ್ಯ ಗುರುಪಾದಪ್ಪನವರ ಮೇಲೆ ಆಪಾದನೆಯನ್ನು ಮಾಡಿಲ್ಲ. ಅಧಿಕಾರಿಗಳ ಮೇಲೆ ಆಪಾದನೆ ಮಾಡಿದ್ದೇನೆಂದು ಹೇಳಿದರು. ಹಾಗೆ ಹೇಳುವ ಅಧಿಕಾರ ಅವರಿಗೆ ಇದೆ. ಯಾವುದೇ ಒಂದು ಸಂಸ್ಥೆಯಲ್ಲಿ ಏನೇ ದುರುಪಯೋಗ, ಅವ್ಯವಹಾರ ಆದರೆ, ಭ್ರಷ್ಟಾಚಾರ ಆದರೆ ಅದನ್ನು ಹೇಳುವ ಅಧಿಕಾರ ಅವರಿಗಿದೆ. ಆದರೆ ನಾನು ಗುರುಪಾದಪ್ಪನವರ ಮೇಲೆ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ನಾನು ತಮಗೆ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಅಷ್ಟೊಂದು ಗಂಭೀರವಾದ ಆಪಾದನೆಗಳನ್ನು ಮಾಡಿದಾಗ ಅವರಲ್ಲಿ ಅದರ ಬಗ್ಗೆ ಸರಿಯಾದ ದಾಖಲಾತಿಗಳು ಇರಬೇಕು. ಅವುಗಳನ್ನು ತಮಗೆ ಕಳುಹಿಸಬೇಕು. ಅದರ ಬಗ್ಗೆ ತಾವು ವಿಚಾರಣೆ ಮಾಡಿಸಬೇಕು. ವಿಚಾರಣೆ ಮಾಡಿಸಬಾರದೆಂದು ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಒಂದೇ ನಿಮಿಷ.

ಶ್ರೀ ಎಂ. ವಿ. ವೆಂಕಟಪ್ಪ : ಅಧ್ಯಕ್ಷರೇ, ಇದೇನು ಪ್ರಶ್ನೋತ್ತರ ವೇಳೆಯೋ ಏನು?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಒಂದೇ ನಿಮಿಷ. ಅವರು ಹೇಳಿದ್ದು ಕಡತಕ್ಕೆ ಹೋಗಿದೆ. ದಯವಿಟ್ಟು ಅದನ್ನು ತೆಗೆಯಿರಿ.

ರಾಜ್ಯದಲ್ಲಿ ತೋಟಗಾರಿಕಾ ಕಾಲೇಜುಗಳು

260-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕೆ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದೆ?

ಆ) ಹೊಸದಾಗಿ ಯಾವ ಯಾವ ಜಿಲ್ಲೆಗಳಲ್ಲಿ ಈ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು?